**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮೀನಲ್ ಮೊಕದ್ದಮೆ ನಂ. 590/2024.**

**ಚಾಸಾ-06**

**ಪ್ರಾಸಾ- 02**

(ಸಾಕ್ಷಿಗೆ ಮರಾಠಿ ಭಾಷೆ ಮಾತ್ರ ಗೊತ್ತಿರುವುದರಿಂದ ಕನ್ನಡ ಭಾಷೆಯಲ್ಲಿ ಕೇಳುವ ಪ್ರಶ್ನೆಗಳನ್ನು ಸಾಕ್ಷಿಗೆ ಮರಾಠಿ ಭಾಷೆಗೆ ಭಾಷಾಂತರಿಸಿ ಸಾಕ್ಷಿ ಮರಾಠಿ ಭಾಷೆಯಲ್ಲಿ ಹೇಳುವ ಉತ್ತರವನ್ನು ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀಮತಿ. ಆರ್.ಎನ್.ಎಮ್. ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಯಿತು ಮತ್ತು ಅವರಿಗೆ ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು)

**ಸಾಕ್ಷಿಗೆ ದಿನಾಂಕ 14-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು ಃ ಶಾಂತಾ ಗಂಃ ನೇತಾಜಿ ಪಾಟೀಲ
ವಯಸ್ಸು ಃ 70 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಜಗಲಪೇಟೆ,ದಾಂಡೇಲಿ

**ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಮೃತ ನೇತಾಜಿ ಪಾಟೀಲ ನನ್ನ ಗಂಡ. ಚಾಸಾ-1 ನನ್ನ ಮೈದುನ. ಆರೋಪಿ ನನಗೆ ಗೊತ್ತು. ಹೀಗೆ ಸುಮಾರು 2 ವರ್ಷಗಳ ಹಿಂದೆ ಜನೇವರಿ 7ನೇ ತಾರೀಖಿಗೆ ಸಂಜೆ 06-15 ಗಂಟೆ ಸಮಯದಲ್ಲಿ ಜೋಯಿಡಾ- ರಾಮನಗರ ರಸ್ತೆಯ ಸಿಂಗರಗಾಂವ ಕ್ರಾಸ್ ಮುಂದೆ ಆದ ಅಪಘಾತದಲ್ಲಿ ನನ್ನ ಗಂಡ ತೀರಿಕೊಂಡಿರುತ್ತಾರೆ.

2. ಆ ದಿನ ಸಂಜೆ ನಾವು ನಮ್ಮ ಹೊಲದಲ್ಲಿ ಕೆಲಸ ಮುಗಿಸಿಕೊಂಡು, ಮರಳಿ ಮನೆಗೆ ನಮ್ಮ ದ್ವಿ ಚಕ್ರವಾಹನದಲ್ಲಿ ನಾನು ಹಿಂದೆ ಕುಳಿತುಕೊಂಡಿದ್ದು, ನನ್ನ ಗಂಡ ಮೃತ ನೇತಾಜಿಯು ಸದರಿ ಬೈಕ್ ನಂಃ ಕೆಎ-3028 ನೇದನ್ನು ಚಲಾಯಿಸಿಕೊಂಡು ಜೋಯಿಡಾ- ರಾಮನಗರ ರಸ್ತೆಯ ಸಿಂಗರಗಾಂವ ಕ್ರಾಸ್ ಮುಂದೆ ಬರುತ್ತಿರುವಾಗ ಆರೋಪಿಯು ರಾಮನಗರ ಕಡೆಯಿಂದ ತನ್ನ ದ್ವಿ ಚಕ್ರ ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ ಅತೀ ವೇಗವಾಗಿ ಮತ್ತು ಅಜಾಗೂರುಕತೆಯಿಂದ ಚಲಾಯಿಸಿಕೊಂಡು

ಬಂದು, ನಾವು ಬರುತ್ತಿದ್ದ ವಾಹನಕ್ಕೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿರುತ್ತದೆ.

3. ನಂತರ ನಾವು ಕೆಳಗೆ ಬಿದ್ದೆವು, ಆಗ ನನ್ನ ಗಂಡನಿಗೆ ತಲೆಗೆ ಸಾಕಷ್ಟು ಪೆಟ್ಟಾಗಿತ್ತು, ನನಗೂ ಸಹ ತಲೆಗೆ ಪೆಟ್ಟಾಗಿತ್ತು. ನಂತರ ಅಲ್ಲಿ ಸೇರಿದ್ದ ಜನರು ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೊದಲು ರಾಮನಗರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು , ಅಲ್ಲಿ ಯಾರು ವೈದಾಧಿಕಾರಿಗಳು ಇಲ್ಲದ ಕಾರಣ, ಖಾನಾಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆದರೆ ಆಸ್ಪತ್ರೆಯಲ್ಲಿ ನನ್ನ ಗಂಡ ತೀರಿಕೊಂಡಿರುವ ವಿಚಾರ ಗೊತ್ತಾಯಿತು.

4. ನಂತರ ಚಾಸಾ-1 ರವರು ನಾನು ಹೇಳಿದ ಪ್ರಕಾರ ದೂರನ್ನು ನೀಡಿರುತ್ತಾರೆ. ನಂತರ ಪೊಲೀಸರು ನನ್ನ ವಿಚಾರಣೆ ಮಾಡಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅವರೇ ಆ ದಿನ ನಮಗೆ ಅಪಘಾತಪಡಿಸಿದ ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿದ್ದನು ಎಂದು ಹೇಳುತ್ತಾರೆ **(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ** .

5. ಆ ದಿನ ನಮಗೆ ಅಪಘಾತಪಡಿಸಿದ ಆರೋಪಿ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ನಂಃ ಕೆಎ-24/ವಾಯ್-3795 ಎಂದರೆ ಸರಿ. ಅದೇ ರೀತಿ ನನ್ನ ಗಂಡನು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ನಂಃ30/ಜೆ-3028 ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಪಿ ವಕೀಲರಿಂದ**

6. ನಾನು ಆ ದಿನ ದ್ವಿ ಚಕ್ರ ವಾಹನದಲ್ಲಿ ಎರಡು ಕಡೆ ಕಾಲು ಹಾಕಿಕೊಂಡು ಹಿಂದೆ ಕುಳಿತಿದ್ದೆ. ನಾನು ಆ ರೀತಿ ಕುಳಿತಿದ್ದರಿಂದ ಸಾಮಾನ್ಯವಾಗಿ ಮುಂದುಗಡೆ ಬರುವ ವಾಹನಗಳು ನನಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಅಪಘಾತವಾದ ರಸ್ತೆಯು ರಾಜ್ಯ ಹೆದ್ದಾರಿಯಾದ ಕಾರಣ, ಅಲ್ಲಿ ಬಹಳಷ್ಟು

ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿಯಲ್ಲ. ನಾವು ಆ ದಿನ ದುರ್ಗಿ ಗ್ರಾಮದಲ್ಲಿರುವ ನಮ್ಮ ಹೊಲಕ್ಕೆ ಹೋಗಿರುತ್ತೇವೆ. ಆ ದಿನ ನನ್ನ ಗಂಡನು ಸಿಂಗರಗಾಂವ ಕ್ರಾಸ್ ನಿಂದ ರಸ್ತೆಯ ಇನ್ನೊಂದು ಬದಿ ಇರುವ ಜಗಲಪೇಟ ರಸ್ತೆಗೆ ಹೋಗಲು ಎದುರುಗಡೆ ಇರುವ ಮುಖ್ಯ ರಸ್ತೆಯನ್ನು ದಾಟಿ ಹೋಗುವಾಗ, ನನ್ನ ಗಂಡನೇ ಯಾವುದೇ ಸೂಚನೆಗಳನ್ನು ನೀಡಿದೆ, ಮುಖ್ಯ ರಸ್ತೆಯನ್ನು ದಾಟಲು ಪ್ರಯತ್ನಿಸಿ ಅಪಘಾತಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ.

8. ನನ್ನ ಗಂಡನು ಕನ್ನಡಕವನ್ನು ಹಾಕುತ್ತಿರಲಿಲ್ಲ. ನನ್ನ ಗಂಡನಿಗೆ ಸುಮಾರು 70-80 ವಯಸ್ಸಾಗಿತ್ತು ಎಂದರೆ ಸರಿ. ವಯಸ್ಸಾದ ಕಾರಣ, ಅವರಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ.

9. ಆ ದಿನ ನನ್ನ ಗಂಡನು ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ನಮ್ಮದೇ ಆಗಿರುತ್ತದೆ. ನನ್ನ ಗಂಡನಿಗೆ ದ್ವಿ ಚಕ್ರ ವಾಹನವನ್ನು ಚಲಾಯಿಸುವ ಯಾವುದೇ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ಗಂಡ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನ ಪೊಲೀಸ್ ಠಾಣೆಯಲ್ಲಿರುತ್ತದೆ. ಸದರಿ ದ್ವಿ ಚಕ್ರ ವಾಹನಕ್ಕೆ ಯಾವುದೇ ವಿಮೆ ಇರದ ಕಾರಣ, ಅದನ್ನು ಬಿಡುಗಡೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಆ ದಿನ ಆರೋಪಿಯು ನಿಧಾನವಾಗಿಯೇ ವಾಹನವನ್ನು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಆ ದಿನ ಸದರಿ ವಾಹನವನ್ನು ಅಂದಾಜು 50 ಮೀಟರ್ ಅಂತರದಿಂದ ನೋಡಿರುತ್ತೇನೆ. ಆ ದಿನ ನಾನು, ನನ್ನ ಗಂಡನ ದ್ವಿ ಚಕ್ರ ವಾಹನದಲ್ಲಿ ಹಿಂದೆ ಕುಳಿತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅತೀ ವೇಗವಾಗಿ ಮತ್ತು ಅಜಾಗೂರುಕತೆಯಿಂದ ವಾಹನವನ್ನು ಚಲಾಯಿಸಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಎಷ್ಟು ವೇಗದಿಂದ ಬರುತ್ತಿದ್ದನು ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**